ವಿಜಯ ಕರ್ನಾಟಕ

Wednesday, April 7th, 2010

# ವಿದೇಶಾಂಗ ವ್ಯವಹಾರ ಪಠ್ಯವಾಗಲಿ: ತರೂರ್

▪ **ವಿಕ ಸುದ್ದಿಲೋಕ** ಮಂಗಳೂರು

ಅಭಿವೃದ್ಧಿ ಭಾರತದ ನಿರ್ಮಾಣಕ್ಕಾಗಿ ದೇಶೀಯ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿ ವಿದೇಶಿ ವ್ಯವಹಾರಗಳ ಕುರಿತು ಶಿಕ್ಷಣ ನೀಡುವ ಅಗತ್ಯವಿದೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರ ಖಾತೆ ರಾಜ್ಯ ಸಚಿವ ಡಾ. ಶಶಿ ತರೂರ್ ಹೇಳಿದ್ದಾರೆ.

ಮಂಗಳೂರು ವಿವಿಯ 28ನೇ ಘಟಿಕೋತ್ಸವ ಸಮಾರಂಭದಲ್ಲಿ ಮಂಗಳವಾರ ಮುಖ್ಯ ಅತಿಥಿಯಾಗಿ ಭಾಗವಹಿಸಿ ಘಟಿಕೋತ್ಸವ ಭಾಷಣ ಮಾಡಿದರು.

ವಿದೇಶಿ ಭಾಷೆಗಳ ಅರಿವಿನ ಜತೆಗೆ ವಿದೇಶಿ ವ್ಯವಹಾರಗಳ ಜ್ಞಾನ ಅತ್ಯಗತ್ಯ. ಇದಕ್ಕಾಗಿ ದೇಶಿಯ ಶಿಕ್ಷಣ ಸಂಸ್ಥೆಗಳು ಈ ಶಿಕ್ಷಣದ ಬಗ್ಗೆ ಕಾರ್ಯೋನ್ಮುಖರಾಗಬೇಕಾಗಿದೆ. ದೇಶದ ವಿವಿ ಮತ್ತು ಕಾಲೇಜುಗಳಲ್ಲಿ ಗುಣಮಟ್ಟದ ಪ್ರಾಧ್ಯಾಪಕರು, ಮೂಲಸೌಲಭ್ಯಗಳ ಕೊರತೆ ಇದೆ. ಪ್ರಸಕ್ತತೆ ಕಳೆದುಕೊಂಡ ಪಠ್ಯ ಕ್ರಮ, ಸಂಶೋಧನಾ ಅವಕಾಶಗಳ ಕೊರತೆ ಹೀಗೆ ಹಲವಾರು ಸಮಸ್ಯೆಗಳಿವೆ. ಶೇ.50ರಷ್ಟು ವಿಭಾಗಗಳಲ್ಲಿ ಇಂಟರ್‌ನೆಟ್ ಸೌಲಭ್ಯಗಳೇ ಇಲ್ಲ. ಇದರಿಂದ ಆನ್‌ಲೈನ್ ಮಾಹಿತಿ, ವಿದೇಶಿ ವಿಚಾರ ವಿನಿಮಯ ಸೇರಿದಂತೆ ಜ್ಞಾನ ವೃದ್ಧಿಸುವ ಮಾಹಿತಿ ಕೊರತೆಯನ್ನು ವಿದ್ಯಾರ್ಥಿಗಳು ಎದುರಿಸುತ್ತಿದ್ದಾರೆ ಎಂದರು.

ರಾಜ್ಯಪಾಲ ಹಾಗೂ ವಿವಿ ಕುಲಾಧಿಪತಿ ಎಚ್.ಆರ್. ಭಾರದ್ವಾಜ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಉನ್ನತ ಶಿಕ್ಷಣ ಸಚಿವ, ವಿವಿ ಸಹಕುಲಾಧಿಪತಿ ಅರವಿಂದ ಲಿಂಬಾವಳಿ, ಮಂಗಳೂರು ವಿವಿ ಕುಲಸಚಿವ ಪ್ರೊ. ಕೆ. ಚಿನ್ನಪ್ಪ ಗೌಡ ಉಪಸ್ಥಿತರಿದ್ದರು.

**ಪದವಿ ಪ್ರದಾನ :** ಇದೇ ಸಂದರ್ಭ ವಿವಿಯಿಂದ ಮೆಟೀರಿಯಲ್ ಸೈನ್ಸ್‌ನಲ್ಲಿ ಒಂದು ಡಾಕ್ಟರ್ ಆಫ್ ಸೈನ್ಸ್, 62 ಡಾಕ್ಟರ್ ಆಫ್ ಫಿಲಾಸಫಿ ಪದವಿ, 30 ಚಿನ್ನದ ಪದಕ ಮತ್ತು 56 ನಗದು ಬಹುಮಾನಗಳನ್ನು ರಾಜ್ಯಪಾಲರು ವಿತರಿಸಿದರು. ಸ್ನಾತಕೋತ್ತರ–48, ಪದವಿ– 22, ಕಲಾ–18, ವಿಜ್ಞಾನ–31, ವಾಣಿಜ್ಯ–14, ಕಾನೂನು– 4 ಮತ್ತು ಶಿಕ್ಷಣ– 3 ಸೇರಿದಂತೆ 70 ರ್‍ಯಾಂಕ್‌ಗಳನ್ನು ವಿತರಿಸಲಾಯಿತು.



ಕೇಂದ್ರ ಮಾಜಿ ಸಚಿವ ಆಸ್ಕರ್ ಫರ್ನಾಂಡಿಸ್ ತನ್ನ ಪತ್ನಿ ಬ್ಲೋಸಂ ಫರ್ನಾಂಡಿಸ್ ಜತೆ ಕುಲಾಧಿಪತಿ ಎಚ್.ಆರ್. ಭಾರದ್ವಾಜ್ ಅವರಿಂದ ಗೌರವ ಡಾಕ್ಟರೇಟ್ ಸ್ವೀಕರಿಸುತ್ತಿರುವುದು.

## ಆಸ್ಕರ್ ಪತ್ನಿಯೂ ವೇದಿಕೆ ಏರಿದಾಗ..!

ರಾಜ್ಯಪಾಲರು ಭಾಗವಹಿಸುವ ವಿಶ್ವವಿದ್ಯಾಲಯಗಳ ಘಟಿಕೋತ್ಸವ ಸಮಾರಂಭ ಅಂದರೆ ಅಲ್ಲಿ ಪ್ರತಿಯೊಂದು ಕೂಡ ಶಿಷ್ಟಾಚಾರ ಪ್ರಕಾರವೇ ನಡೆಯಬೇಕು. ಆದರೆ ಮಂಗಳೂರು ವಿವಿ ಘಟಿಕೋತ್ಸವ ಸಮಾರಂಭದಲ್ಲಿ ಕೇಂದ್ರ ಮಾಜಿ ಸಚಿವ ಆಸ್ಕರ್ ಫರ್ನಾಂಡಿಸ್ ಈ ಎಲ್ಲಾ ಶಿಷ್ಟಾಚಾರ ಉಲ್ಲಂಘಿಸಿ ಸುದ್ದಿಯಾಗಿದ್ದಾರೆ. ರಾಜ್ಯಪಾಲ ಹಾಗೂ ಕುಲಾಧಿಪತಿ ಎಚ್.ಆರ್. ಭಾರದ್ವಾಜ್ ಅವರಿಂದ ಆಸ್ಕರ್ ಫರ್ನಾಂಡಿಸ್ ಗೌರವ ಡಾಕ್ಟರೇಟ್ ಸ್ವೀಕರಿಸುವ ಸಂದರ್ಭ ಪ್ರೇಕ್ಷಕರ ಸೀಟಿನಲ್ಲಿ ಕೂತಿದ್ದ ತನ್ನ ಪತ್ನಿ ಬ್ಲೋಸಂ ಫರ್ನಾಂಡಿಸ್‌ರನ್ನು ವೇದಿಕೆಗೆ ನೇರವಾಗಿ ಕರೆದು ಜತೆಯಾಗಿ ಪದವಿ ಪ್ರದಾನ ಸರ್ಟಿಫಿಕೆಟ್ ಸ್ವೀಕರಿಸುವ ಮೂಲಕ ಅಚ್ಚರಿ ಮೂಡಿಸಿದರು. ಎಲ್ಲ ನಿರ್ಬಂಧಗಳನ್ನು ಮೀರಿ ನೇರವಾಗಿ ವೇದಿಕೆಗೆ ತೆರಳಿದ ಬ್ಲೋಸಂ ತನ್ನ ಪತಿಯೊಂದಿಗೆ ನಿಂತು ಫೋಟೋ ಕ್ಲಿಕ್ಕಿಸಿಕೊಂಡರು. ಅಷ್ಟೇ ಅಲ್ಲ ಡಾಕ್ಟರೇಟ್ ಸರ್ಟಿಫಿಕೆಟ್‌ನ್ನು ತಾನು ತೆಗೆದುಕೊಂಡು ಹೋಗಿ ಮತ್ತೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಕೂತು ಬಿಟ್ಟರು. ಸಮಾರಂಭದಲ್ಲಿ ರಾಜ್ಯಪಾಲರ ಪತ್ನಿ ಪ್ರೇಕ್ಷಕರ ಸಾಲಿನಲ್ಲಿ ಕುಳಿತು ಕಾರ್ಯಕ್ರಮ ವೀಕ್ಷಿಸಿದರು.

## ಗೌರವ ಡಾಕ್ಟರೇಟ್ ಪ್ರದಾನ

ಕೋಲ್ಕೊತಾ ವೇರಿಯೇಬಲ್ ಎನರ್ಜಿ ಸೈಕ್ಲೋಟ್ರೋನ್ ಸೆಂಟರ್ ನಿರ್ದೇಶಕ ಹಾಗೂ ಪರಮಾಣು ವಿಜ್ಞಾನಿ ಡಾ. ರಾಕೇಶ್ ಕುಮಾರ್ ಭಂಡಾರಿ, ಮೂಡುಬಿದರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ಬೆಂಗಳೂರಿನ ವಿಷ್ಣು ಭಾರತ್ ಆ್ಯಂಡ್ ಕಂಪನಿಯ ಚಾರ್ಟರ್ಡ್ ಅಕೌಂಟೆಂಟ್ ಎ.ಎಸ್. ವಿಷ್ಣು ಭಾರತ್, ಬೆಂಗಳೂರಿನ ವಿಷ್ಣನ್ ಸೆಂಟರ್ ಫಾರ್ ಎಂಟರ್ ಪ್ರೆನೇರಿಯಲ್‌ನ ಟ್ರಸ್ಟ್ ನಿರ್ದೇಶಕಿ ಮಧುರಾ ಎಂ. ಛತ್ರಪತಿ, ಕೇಂದ್ರ ಮಾಜಿ ಕಾರ್ಮಿಕ ಸಚಿವ ಆಸ್ಕರ್ ಫರ್ನಾಂಡಿಸ್, ಯಕ್ಷಗಾನ ಕಲಾವಿದ ಕೋಳ್ಯೂರು ರಾಮಚಂದ್ರ ರಾವ್, ಬೆಂಗಳೂರಿನ ಜೈನ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ ಅಧ್ಯಕ್ಷ ಆರ್. ಚೆನ್‌ರಾಜ್ ಜೈನ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.